











# ಮ್ಯಾಕ್ಸಿ ಡ್ರೆಸ್

*ನೀವು ನಿಮಗಾಗಿ ಇಂತಹ ಮ್ಯಾಕ್ಸಿ ಡ್ರೆಸನ್ನು ಹೊಲೆಯಲು ಇಚ್ಚಿಸುವಿರಾದರೆ ನಿಮಗಾಗಿ ಈ ವೀಡಿಯೋ.*


## ವಸ್ತುಗಳ ವಿವರ


೪೫ ಇಂಚು ಅಗಲವಿರುವ ೪ ಮೀಟರ್ ಬಟ್ಟೆ
www.ushasew.com ನಿಂದ ಡೌನ್ಲೋಡ್ ಮಾಡಿಕೊಂಡ ಮ್ಯಾಕ್ಸಿ ಡ್ರೆಸ್ಸಿನ ಟೆಂಪ್ಲೇಟ್
ಚಾಲ್ಕ್
ಕತ್ತರಿ
ಬಟ್ಟೆಗೆ ಹೊಂದುವಂತ ದಾರ
ಪಿನ್ಸ್
ಮತ್ತು ಊಷಾ ಜನೋಮ್ ಗ್ಯಾಥರಿಂಗ್ ಫುಟ್

ನಾವೀಗ ವಿವಿಧ ಭಾಗಗಳಾದ ಮುಂಭಾಗ, ಹಿಂಭಾಗ, ತೋಳಿನ ಭಾಗ ಮತ್ತು ಯೊಕ್ ಆಕಾರವನ್ನು ಕತ್ತರಿಸುವುದು, ಯೊಕ್ ಆಕಾರವನ್ನು ಬಟ್ಟೆಯ ಮುಂಭಾಗಕ್ಕೆ ಹೊಲೆಯುವುದು, ಹಿಂಭಾಗವನ್ನು ಮುಂದಕ್ಕೆ ಹೊಲೆಯುವುದು, ಕತ್ತಿನ ಭಾಗವನ್ನು ಹೂಲೆಯುವುದು, ತೋಳನ್ನು ಸೇರಿಸುವುದು, ಸೈಡ್ ಸೀಮನ್ನು ಹೊಲೆಯುವುದು ಮತ್ತು ಅಂಚು ಮತ್ತು ತೋಳಿಗೆ ಹೆಮ್ಮಿಂಗ್ ಮಾಡುವುದನ್ನು ಕಲೆಯೋಣ. ನೀವು ತಯಾರಾಗಿದ್ದೀರಾ?

## ಹಂತ ೧ : ಟೆಂಪ್ಲೇಟಿನಂತೆ ಮಾರ್ಕ್ ಮಾಡಿ ಹೊಲೆಯುವುದು

ನಿಮಗಿಷ್ಟವಾದ ಬಟ್ಟೆಯನ್ನು ತೆಗೆದುಕೊಂಡು ಉದ್ದವಾಗಿ ವೀಡಿಯೋ ದಲ್ಲಿ ತೋರಿಸಿರುವಂತೆ ಅರ್ಧಕ್ಕೆ ಮಡಚಿ. ಈಗ www.ushasew.com ಡೌನ್ಲೋಡ್ ಮಾಡಿಕೊಂಡ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಇಟ್ಟು ಪಿನ್ ಮಾಡಿ . ಟೆಂಪ್ಲೇಟನ್ನು ಬಟ್ಟೆಯ ಮಡಚಿರುವ ಭಾಗದ ಮೇಲೆ ಇಡಿ. ನಂತರ  ಅದನ್ನು ಚಾಲ್ಕ್ ನ ಸಹಾಯದಿಂದ  ಮಾರ್ಕ್ ಮಾಡಿ ಪಿನ್ ಮಾಡಿ ಇದಾದ ಮೇಲೆ ಕತ್ತರಿಯ ಸಹಾಯದಿಂದ ಹುಷಾರಾಗಿ ಮಾರ್ಕ್ ಮಾಡಿರುವ ಹಾಗೆ  ಕತ್ತರಿಸಿ. ಈಗ ಇದನ್ನು ಪಕ್ಕಕ್ಕಿಟ್ಟು ಮುಂದಿನ ಹಂತಕ್ಕೆ ಹೋಗೋಣ. ಈಗ ಮಿಕ್ಕಿರುವ ಬಟ್ಟೆಯನ್ನು ಉಳಿದಿರುವ ಭಾಗಗಳನ್ನು ಕತ್ತರಿಸೋಣ, ಬಟ್ಟೆಯನ್ನು ನಾಲ್ಕು ಭಾಗವಾಗಿ ಮಡಚಿ ಯೊಕ್ ಎಂಬ ಮಾರ್ಕ್ ಇರುವ ಟೆಂಪ್ಲೇಟನ್ನು ವೀಡಿಯೋದಲ್ಲಿ ತೋರಿಸಿರುವಂತೆ ಪಿನ್ ಮಾಡಿ ಮಾರ್ಕ್ ಮಾಡಿ. ಪಿನ್ ನನ್ನು ತೆಗೆದು ಕಟ್ ಮಾಡಿ. ಬಟ್ಟೆ ಭದ್ರವಾಗಿ ನಿಲ್ಲಲು ಕಟ್ ಮಾಡುವವರೆಗೂ ಪಿನ್ ನನ್ನು  ಹಾಕಿ.
ಈಗ ವೀಡಿಯೋದಲ್ಲಿ  ತೋರಿಸಿರುವ ಹಾಗೆ ಯೋಕ್ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಇಟ್ಟು ಯೋಕ್ ಆಕಾರವನ್ನು ಇದೇ ವಿಧಾನವನ್ನು ಪುನರಾವರ್ತಿಸಿ. ಈಗ ನಿಮ್ಮ ಬಳಿ ಎರಡು ಯೋಕ್ ಆಕಾರದ ತುಂಡುಗಳಿರಬೇಕು.















ಈಗ ಮುಂಭಾಗದ ಟೆಂಪ್ಲೇಟನ್ನು ಮಿಕ್ಕಿರುವ ಬಟ್ಟೆಯನ್ನು . ಟೆಂಪ್ಲೇಟಿನ ಫ಼ೋಲ್ಡ್ ಭಾಗವನ್ನು ಬಟ್ಟೆಯ ಮಡಚಿರುವ ಭಾಗದ ಮೇಲೆ ಇಡಬೇಕು. ತುಂಬಾ ಜಾಗ್ರತೆಯಿಂದ ಮಾಡಿ ಏಕೆಂದರೆ ನಾವು ಟೆಂಪ್ಲೇಟಿನಲ್ಲಿ ಸೂಚಿಸಿರುವಂತೆ ನಾಚನ್ನು ಮಾರ್ಕ್ ಮಾಡಬೇಕು. ಕತ್ತರಿಯ ಸಹಾಯದಿಂದ ಮಾರ್ಕಿಂಗ್ ಮೇಲೆ ಕತ್ತರಿಸಿ.

ಈಗ ಕೊನೆಯಲ್ಲಿ ತೋಳಿನ ಭಾಗವನ್ನೂ ಇದೇ ಕ್ರಮದಲ್ಲಿ ಪಿನ್ ಮಾಡುವುದು, ಮಾರ್ಕ್ ಮಾಡುವುದು ಮತ್ತು ಕಟ್ ಮಾಡುವುದನ್ನು ಪುನರಾವರ್ತಿಸೋಣ.

## ಹಂತ ೨ : ಬಟ್ಟೆಯ ಮುಂಭಾಗವನ್ನು ಸಂಗ್ರಹಿಸಿ ಮತ್ತು ಯೋಕ್ ಭಾಗವನ್ನು ಮುಂಭಾಗಕ್ಕೆ ಜೋಡಿಸುವುದು

ಮುಂಭಾಗದ ಬಟ್ಟೆಯನ್ನು ಮಾರ್ಕ್ ಮಾಡಿರುವಂತೆ ಕತ್ತರಿಯ ಸಹಾಯದಿಂದ ನಾಚನ್ನುಮಾಡಿ ಗ್ಯಾಥರನ್ನು ಪಾಯಿಂಟಿನ ಮೇಲೆ ಸೃಷ್ಟಿಸಿ. ಇದನ್ನು ಮಾಡಲು ಊಷಾ ಜೆನೋಮ್ ವಂಡರ್ ಸ್ಟಿಚ್ ಹೊಲಿಗೆ ಯಂತ್ರದ A ಫ಼ುಟ್ಟನ್ನು ತೆಗೆದು ಊಷಾ ಜೆನೋಮ್ ಗ್ಯಾಥರಿಂಗ್ ಫ಼ುಟನ್ನು ಜೋಡಿಸಿ. ತ್ರೆಡ್ ಟೆಂಷನ್ ಡಯಲನ್ನು ಪೂರ್ತಿಯಾಗಿ ಒಂಬತಕ್ಕೆ ಇಡಿ ಹಾಗು ಹೊಲಿಗೆಯ ಉದ್ದ ೩.೫ ಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ನಿಮ್ಮ ಗ್ಯಾಥರ್ ನೋಡಲು ಹೀಗೆ ಕಾಣಬೇಕು.ಈಗ ಯೋಕ್ ನ ಎರಡೂ ಭಾಗವನ್ನು ತೆಗೆದುಕೊಂಡು ಅರ್ಧಕ್ಕೆ ಮಡಚಿ ಮಧ್ಯದಲ್ಲಿ ನಾಚನ್ನು ಇಲ್ಲಿ ತೋರಿಸಿರುವಂತೆ ಮಾಡಿ. ಎರಡಕ್ಕೂ ಇದೇ ರೀತಿ ಮಾಡಬೇಕು. ಮುಂಭಾಗವನ್ನೂ ಅರ್ಧಕ್ಕೆ ಮಡಚಿ ಮಧ್ಯದಲ್ಲಿ ನಾಚನ್ನು ಮಾಡಬೇಕು. ಇದು ಬಟ್ಟೆಯನ್ನು ಹೊಂದಿಸಲು ಸುಲಭವಾಗುತ್ತದೆ.

ಇದಾದ ನಂತರ ಒಂದು ಯೋಕ್ ಪೀಸನ್ನು ತೆಗೆದುಕೊಂಡು ಮಧ್ಯದ ನಾಚನ್ನು ಹೊಂದಿಸಿ ಮುಂಭಾಗದ ಬಟ್ಟೆಯ ಬಲಗಡೆ ಬಲಗಡೆಯನ್ನು ನೋಡುವಂತೆ ವೀಡಿಯೋದಲ್ಲಿ ತೋರಿಸಿರುವಂತೆ ಇಡಬೇಕು. ಈಗ ಇನ್ನೊಂದು ಪೀಸನ್ನು ತೆಗೆದುಕೊಂಡು ನಾಚಸನ್ನು ಹೊಂದಿಸಿ ಮುಂಭಾಗದ ಬಟ್ಟೆಯ ಕೆಳಗೆ  ಇಡಬೇಕು. ಯೋಕಿನ ಬಲಭಾಗ ಬಟ್ಟೆಯ ಹಿಂಭಾದಲ್ಲಿರಬೇಕು.ಈ ಎಲ್ಲಾ ಮೂರು ಪಿಸ್ಸನ್ನು ಪಿನ್ ಮಾಡಿ ವೀಡಿಯೋದಲ್ಲಿ ತೋರಿಸಿರುವಂತೆ ಜೋಡಿಸಿ.

ನಿಮಗೆ ನೆನೆಪಿರಲಿ, ಯೋಕಿನ ಪಾಯಿಂಟ್ ಇರುವ ಭಾಗ ಭುಜದಭಾಗವಾಗಿರುತ್ತದೆ, ಭುಜ ಮತ್ತು ಇದು ಕೈ ಭಾಗದ ರಂಧ್ರವಾಗಿರುತ್ತದೆ. ಎರಡೂ ಕೈನ್ ರಂಧ್ರವನ್ನು ಹೊಂದಿಸಿ ಪಿನ್ ಮಾಡಿ. ಬೇರೆ ಎಲ್ಲಾ ಭಾಗಗಳನ್ನು ಪಿನ್ ಮಾಡಿ. ಇದು ಸ್ವಲ್ಪ ಕಷ್ಟವೆನಿಸಬಹುದು ಗಮನವಿಟ್ಟು ಮಾಡಿ.ಪಿನ್ ಮಾಡಿದ ಮೇಲೆ ಬಟ್ಟೆಯ ಮುಂಭಾಗ ಹೇಗೆ ಕಾಣಬೇಕು. ಇದನ್ನು ಯೋಕೆನ್ನುತ್ತಾರೆ.

ಮಶೀನಿನ ಹತ್ತಿರ ಹೋಗೋಣ ಮತ್ತು ಇದನ್ನು ಒಟ್ಟಿಗೆ ಹೊಲೆಯೋಣ. ನಾವೀಗಾಗಲೆ ಗ್ಯಾಥರಿಂಗ್ ಫ಼ುಟ್ಟನ್ನು ತೆಗೆದು A ಫ಼ುಟ್ಟನ್ನು ಜೋಡಿಸಿದ್ದೇವೆ. ಈಗ ರೌಂಡ್ ಯೋಕನ್ನ್ ಪ್ರೆಸ್ಸರ್ ಫ಼ುಟ್ ನ ಅಂಚಿಗೆ ಜೋಡಿಸಿ ಹೊಲೆಯಲು ಪ್ರಾರಂಭಿಸಿ, ಹೀಗೆ ಹೊಲೆಯುತ್ತಿರುವಾಗ ಪಿನ್ಗಳನ್ನು ತೆಗೆಯಿರಿ.ಪೂರ್ತಿಯಾದ ಹೊಲಿಗೆಯು ಹೀಗೆ ಕಾಣಬೇಕು.

## ಹಂತ 3 : ಮುಂಭಾಗ ಮತ್ತು ಹಿಂಭಾಗವನ್ನು ಜೋಡಿಸುವುದು







ಬಲಭಾಗದ ತೋಳನ್ನು ಬಲಭಾಗಕ್ಕೆ ಮುಂಭಾಗದ ಪೀಸ್ ಗೆ ಜೋಡಿಸಿ ಪಿನ್ ಮಾಡಿ ಒಟ್ಟಿಗೆ ಹೊಲೆಯೋಣ. ಪ್ರಾರೊಭ ಮತ್ತು ಅಂತ್ಯದಲ್ಲಿ ರಿವರ್ಸ್ ಹೊಲಿಗೆ ಹಾಕಲು ಮರೆಯಬೇಡಿ. ಹೆಚ್ಚುವರಿಯಾಗಿರುವ ದಾರವನ್ನು ಕತ್ತರಿಸಿ ಮತ್ತು ಇನ್ನೊಂದು ಭುಜಕ್ಕೂ ಇದನ್ನೇ ಪುನರಾವರ್ತಿಸಿ.

## ಹಂತ 4 : ಕತ್ತಿನ ಭಾಗವನ್ನು ಹೊಲೆಯುವುದು











ನೀವು ತೆಗೆದುಕೊಂಡಿರುವ ಬಟ್ಟೆಯಿಂದ 1 ಇಂಚು ಬಯಾಸ್ಸ್ಟ್ರಿಪನ್ನು ಕತ್ತರಿಸಿಕೊಳ್ಳಿಬಯಾಸ್ಸ್ಟ್ರಿಪನ್ನು ಹೇಗೆ ಕತ್ತರಿಸುವುದು ಎಂದು ತಿಳಿಯಲು www.ushasew.com ನಲ್ಲಿ ಟೆಂಟ್ ಡ್ರೆಸ್ ನ ವೀಡಿಯೋ ನೋಡಿ.ಸಮಯವನ್ನು ಉಳಿಸಲು ನಾವು ಈಗಾಗಲೆ ಒಂದನ್ನು ಕತ್ತರಿಸಿದ್ದೇವೆ.ಅದನ್ನು ಅರ್ಧಕ್ಕೆ ಮಡಚಿ ನೆಕ್ಲೈನಿಗೆ ಬಟ್ಟೆಯ ಬಲ ಭಾಗಕ್ಕೆ ಹೊಂದಿಸಿ. ಸ್ಟ್ರಿಪಿನ ತೆರೆದಿರುವ ಭಾಗ ನೀವು ಹೊಲೆಯುತ್ತಿರುವ ಕಡೆ ಮೇಲಕ್ಕಿರಬೇಕು. ಎಲ್ಲಾ ಕಡೆ ಹೊಲೆಯಿರಿ ಮತ್ತು ಹೆಚ್ಚಾದ ಬಟ್ಟೆಯನ್ನು ಕತ್ತರಿಸಿ. ನಿಮ್ಮ ಅಂತಿಮ ಹೊಲಿಗೆ ಹೀಗೆ ಕಾಣಬೇಕು. ಬಯಾಸ್ಸ್ಟ್ರಿಪನ್ನು ಪ್ರಾರಂಭದಲ್ಲಿ ಮಡಚಿ ಕೊನೆಯಲ್ಲಿ ಓವರ್ಲಾಪ್ ಮಾಡಿ. ಮುಂಭಾಗದ ಕೊನೆಯಲ್ಲಿ ಹೊಲಿಗೆ ಹಾಕಿ. ಇದದ ನಂತರ ವೀಡಿಯೋದಲ್ಲಿ ತೋರಿಸಿರುವ ಹಾಗೆ ನೆಕ್ ಲೈನಿನ ಮೇಲೆ ಸ್ಲಾಶಸನ್ನು ಮಾಡಬೇಕು. ಇದು ಸರ್ಕಲನ್ನು ಫ್ಲಾಟ್ ಮಾಡುತ್ತದೆ. ಇದು ಕತ್ತಿನ ಭಾದಲ್ಲಿ ಸರಿಯಾಗಿ ಕೂತಿದೆಯೆ ಎಂದು ಖಾತ್ರಿಮಾಡಿಕಳ್ಳಿ, ಈಗ ಬಯಾಸ್ಸ್ಟ್ರಿಪನ್ನು ವೀಡಿಯೋದಲ್ಲಿ ತೋರಿಸಿರುವ ಹಾಗೆ ಒಳಕ್ಕೆ ಮಡಚಿ ಮಡಿಕೆಯಮೇಲೆ ಹೊಲೆಯಿರಿ. ನೆಕ್ ಲೈನಿನ ಕೊನೆಯವರೆಗೂ ಹೀಗೆ ಹೊಲೆಯಿರಿ. ಹೆಚ್ಚಾದ ದಾರವನ್ನು ಕತ್ತರಿಸಿ.

ಶುಭಾಶಯ! ನಮ್ಮ ನೆಕ್ ಲೈನ್ ಈಗ ಮುಗಿಯಿತು, ಈಗ ತೋಳಿನಕಡೆ ಗಮನವಹಿಸೋಣ.

## ಹಂತ 5 – ತೋಳನ್ನು ಸೇರಿಸುವುದು





ತೋಳಿನ ಭಾಗವನ್ನು ಅರ್ಧಕ್ಕೆ ಮಡಚಿ ಮಧ್ಯದಲ್ಲಿ ನಾಚ್ ಮಾಡಿ. ಗಮನದಲ್ಲಿರಲಿ ತೋಳು, ಡ್ರೆಸ್ಸಿನ ಮುಂಭಾಗ ಮತ್ತು ಹಿಂಭಾಗ ಎಲ್ಲಾ ಒಂದೇ ಸಮ ಇರಬೇಕು. ಈ ಮಧ್ಯಭಾಗಗಳ ನಾಚಸ್ ಭುಜದ ಮಧ್ಯಭಾಗವನ್ನು ಸೇರಬೇಕು. ಇದನ್ನು ಮಾಡಲು ತೋಳನ್ನು ವೀಡಿಯೋದಲ್ಲಿ ತೋರಿಸಿರುವಂತೆ ಪಿನ್ ಮಾಡಿ. ಎರಡೂ ತೋಳಿಗೆ ಹೀಗೆ ಮಾಡಿ. ಬಟ್ಟೆಗೆ ಪಿನ್ ಮಾಡುವಾಗೆ ಜೋಪಾನವಾಗಿರಿ. ಈಗ ಹೊಲೆಯಲು ಪ್ರಾರಂಭಿಸೋಣ.

ಪಿನ್ ಮಾಡಿರುವ ಭಾಗವನ್ನು ಪ್ರೆಸ್ಸರ್ ಫುಟ್ ನ ಎಡ್ಜ್ ನಲ್ಲಿ ಇಟ್ಟು ಹೊಲೆಯಲು ಪ್ರಾರಂಭಿಸಿ, ಹೊಲೆಯುವಾಗ ಪಿನ್ಗಳನ್ನು ತೆಗೆಯಲು ಮರೆಯಬೇಡಿ.

ಇದೇ ವಿಧಾನವನ್ನು ಇನ್ನೊಂದು ಕಡೆ ಅನುಸರಿಸೋಣ. ತುದಿಗಳನ್ನು ಜಿಗ್ ಜಾಗ್ ಹೊಲಿಗೆಯಿಂದ ಜೋಡಿಸಬೇಕು.





ಪ್ಯಾಟ್ರ್ನ್ ಸೆಲೆಕ್ಟರ್ ಡಯಲನ್ನು C ಗೆ ಸೆಟ್ ಮಾಡಿ ಹೊಲಿಗೆಯ ಉದ್ದ 1.5ಗೆ ಇಟ್ಟು ಹೊಲೆಯಿರಿ. ನೆನಪಿರಲಿ ಜಿಗ್ ಜಾಗ್ ಹೊಲಿಗೆಗೆ ರೆವ್ರಸ್ ಹೊಲಿಗೆ ಇರುವುದಿಲ್ಲಾ. ಇದು ಎರಡು ಕಡೆಯಲ್ಲೂ ಮಾಡಬೇಕು.ಎರಡೆರಡು ಕೆಲಸ ಎನಿಸಬಹುದು ಆದರೆ ಇದು ತುಂಬಾ ಉಪಯೋಗವಾದದು.
ನಮ್ಮ ಅಂತಿಮ ಹೊಲಿಗೆ ಹೀಗೆ ಕಾಣಬೇಕು.

## ಹಂತ 5 : ಸೈಡ್ ಸೀಮ್ ಮತ್ತು ಹೆಮ್ ಲೈನ್ ಹೊಲೆಯುವುದು





ನಾವೀಗ ಸೈಡ್ ಸೀಮಿನ್ನು ಹೊಲೆಯೋಣ ವೀಡಿಯೋದಲ್ಲಿ ತೋರಿಸಿರುವಂತೆ ಡ್ರೆಸನ್ನು ಹೋಲುವಂತೆ ಮಡಚೋಣ. ನಾವೀಗ ಪಾಯಿಂಟ್ ಇರುವ ಜಾಗವನ್ನು ಎರಡೂ ಕಡೆ ಹೊಲೆಯಬೇಕು ಮತ್ತು ತೋಳಿನ ಭಾಗ ಮತ್ತು ಡ್ರೆಸ್ಸಿನ ಬಾಟಮನ್ನು ಹೆಮ್ ಮಾಡಬೇಕು. ಈಗ ಶುರು ಮಾಡೋಣ.

ಸೈಡ್ ಸೀಮ್, ತೂಳನ್ನು ಅಲೈನ್ ಮಾಡಿಕೊಳ್ಳಿ, ಇದಕ್ಕೆ ಮೊದಲು ಪ್ರೆಸರ್ ಫುಟನ್ನು ಮೊದಲು ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನ A ಗೆ ಸೆಟ್ ಮಾಡಿ ನೇರ ಹೊಲಿಗೆಗೆ ಹೊಲಿಗೆಯ ಉದ್ದ 2.5ಗೆ ಇಡಬೇಕು. ಹೊಲೆಯಲು ಪ್ರಾರಂಭಿಸಿ ಬಟ್ಟೆಯ ಕೆಳಗಿನ ವರೆಗೂ ಹೊಲೆಯಬೇಕು. ನಿಧಾನ ವಾಗಿ ಮತ್ತು ಏಕಾಗ್ರತೆಯಿಂದ ಹೊಲೆಯಿರಿ. ತುದಿಯನ್ನು ತಲುಪಿದ ನಂತರ ರೆವೆರ್ಸ್ ಹೊಲಿಗೆಯನ್ನು ಹಾಕಲು ಮರೆಯದಿರಿ ಇದು ಹೊಲಿಗೆಯನ್ನು ಭದ್ರಗೊಳಿಸಲು ಸಹಾಯ ಮಾಡುತ್ತದೆ. ಇನ್ನೊಂದು ಕಡೆನೂ ಹೀಗೆ ಮಾಡಿ ಇದೇ ವಿಧಾನವನ್ನು ಅನುಸರಿಸಿ.



ಇದಾದ ನಂತರ ಹೆಚ್ಚಿರುವ ದಾರವನ್ನು ಕತ್ತರಿಸಿ ಜಿಗ್ ಜಾಗ್ ಹೊಲಿಗೆಯನ್ನು ಎರಡೂ ಸೈಡ್ ಸೀಮನ್ನು ಹೊಲೆಯಿರಿ. ವೀಡಿಯೋದ ಸಮಯವನ್ನು ಉಳಿಸಲು ನಾವು ಈ ಹಂತವನ್ನು ಮೊದಲೆ ಮುಗಿಸಿದ್ದೇವೆ ಆದರೆ ನೀವು ಇದನ್ನು ತಪ್ಪದೆ ಪಾಲಿಸಿ. ಇದು ಡ್ರೆಸ್ಸನ್ನು ಮುಗಿಸಲು ಅತ್ಯಂತ ಮುಖ್ಯ



ತೋಳಿನ ಭಾಗವನ್ನು ಹೆಮ್ ಮಾಡೋಣ ಅದಕ್ಕೆ ತೋಳನ್ನು ಎರಡುಬಾರಿ ಮಡಚಿ ಕಾಲು ಇಂಚು ಮಡಚಬೇಕು ಮತ್ತು ನೇರವಾದ ಹೊಲಿಗೆಯನ್ನು ನೋಡಬೇಕು. ತೋಳಿನ ಪೂರ್ತಿ ಹೀಗೆ ಮಾಡಿ ಹೊಲೆಯುವಾಗ ಹಾಗೆ ಹೊಂದಿಸಿಕೊಂಡು ಹೊಲೆಯಿರಿ. ದಾರವನ್ನು ಕತ್ತರಿಸಿ ಮತ್ತು ಇನ್ನೊಂದು ಕಡೆನೂ  ಇದೇ ವಿಧಾನವನ್ನು ಅನುಸರಿಸಿ. ನಿಮ್ಮ ಅಂತಿಮ ಹೊಲಿಗೆ ಹೀಗೆ ಕಾಣಬೇಕು.



ಇದು ಮುಗಿದ ಮೇಲೆ ಡ್ರೆಸ್ಸಿನ ಬಾಟಮನ್ನು ತೋಳನ್ನು ಹೊಲೆದ ರೀತಿಯಲ್ಲೇ ಎರಡು ಬಾರಿ ಕಾಲು ಇಂಚಿನಷ್ಟು ಮಡಚಿ ಪೂರ್ತಿ ಹೊಲೆಯಬೇಕು .ನಿಮ್ಮ ಅಂತಿಮ ಹೊಲಿಗೆ ಹೀಗೆ ಕಾಣಬೇಕು. ಪುನರಾವರ್ತಿಸಲು, ನಾವು ಸೈಡ್ ಸೀಮನ್ನು ಹೊಲೆದು ತೋಳನ್ನು ಹೆಮ್ ಮಾಡಿದ್ದೇವೆ ಮತ್ತು ಡ್ರೆಸ್ಸಿನ ಬಾಟಮನ್ನು ಹೊಲೆದಿದ್ದೇವೆ. ಇದರೊಂದಿಗೆ ನಾವು ಹೊಲಿಗೆಯ ಹಂತವನ್ನು ಮುಗಿಸಿದ್ದೇವೆ.

ತುಂಬಾ ಅದ್ಭುತವಾಗಿದೆ ಅಲ್ವಾ? ಈ ಡ್ರೆಸ್ಸನ್ನು ನಾವು ಶಾಪಿಂಗಿಗೆ, ಸಿನಿಮಾಗೆ, ಊಟಕ್ಕೆ ಎಲ್ಲಿಗೆ ಬೇಕಾದರೂ ಹಾಕಿಕೊಳ್ಳಬಹುದು.ತುಂಬಾ ಶ್ರಮವಿಲ್ಲದೆ ಇದು ತುಂಬಾ ಅದ್ಭುತವಾದ ಡ್ರೆಸ್. ನಿಮಗೆ ಇದು ಹೇಗೆ ಅನಿಸಿತು ಎಂದು ನಮಗೆ ಕಮೆಂಟ್ ನಲ್ಲಿ ತಿಳಿಸಿ. ಮುಂದೆ ಯಾವ ವೀಡಿಯೋ ನೋಡಲು ಬಯಸುತ್ತೀರ ಎಂದು ತಿಳಿಸಿ.

ಮರೀದೆ ಲೈಕ್ ಮಾಡಿ, ಶೇರ್ ಮಾಡಿ ಹಾಗೂ ಸಬ್ಸ್ಕ್ರೈಬ್ ಮಾಡಿ.